| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫೀ ಮಾತ್ರ; ಕಪ್ಪುಗಳನ್ನಲ್ಲ. ಅಲಂಕಾರಗಳ ಬೆನ್ನತ್ತಿ ಓಡಬೇಡಿ. ಕಪ್ಪುಗಳ ಚಿಂತೆ ಬೇಡ, ಕಾಫೀ ಆಸ್ವಾದಿಸಿ'' ಎಂದು ಹೇಳುತ್ತಾರೆ. ಈ ಮಾತಿನಲ್ಲಿ ಗುರುಗಳಿಗೆ ಶಿಷ್ಯರ ಮೇಲಿನ ಪ್ರೀತಿ, ಕಳಕಳಿಯ ಭಾವ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 40. | ''ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ.''<br>***ಉತ್ತರ :***<br>ಈ ವಾಕ್ಯವನ್ನು ಡಾ. ಬಸವಪ್ರಭು ಪಾಟೀಲ ಮತ್ತು ಕೆ. ಸಿದ್ಧಯ್ಯಸ್ವಾಮಿ ಯವರ ಜೊತೆಗೂಡಿ ರಚಿಸಿದ 'ಯೂರೋಪಿನಲ್ಲಿ' ಕೃತಿಯಿಂದ ಆಯ್ದ 'ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಲಂಡನ್ ನಗರ ರಾತ್ರಿ ಕಂಡ ರೀತಿಯನ್ನು ಹೇಳಿದ್ದಾರೆ. ಥೇಮ್ಸ್ ನದಿಯ ದಡದಲ್ಲಿರುವ ಸುಂದರ ನಗರ ಲಂಡನ್. ಲೇಖಕರು ಲಂಡನ್ ನಗರದ ಸೌಂದರ್ಯವನ್ನು ವರ್ಣಿಸಿದ್ದಾರೆ. ಲಂಡನ್ ಮಧ್ಯರಿಂದ ಹೊರವಲಯದ ಕಡೆಗೆ ಬಂದಂತೆಲ್ಲ ''ಲಂಡನ್ ಮಲಗಿ ನಿದ್ರಿಸುತ್ತಿದೆಯೇ ಅನಿಸುತ್ತದೆ.'' ರಸ್ತೆ ಮೇಲೆ ಕಾರುಗಳು, ಅಪರೂಪಕ್ಕೊಮ್ಮೆ ಸೈಕಲ್ ಕಾಣುತ್ತವೆ. ಮನೆ ಮುಂದೆ ಜನಗಳೇ ಇಲ್ಲ. ಇಲ್ಲಿ ರಾತ್ರಿ ೯ ಕ್ಕೆ ಕತ್ತಲಾಗುವುದು. ಈ ಮಾತಿನಲ್ಲಿ ರಾತ್ರಿ ಲಂಡನ್ ನಗರದ ಪ್ರಶಾಂತ ವಾತಾವರಣ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 41. | ''ಎಲ್ಲರೆದೆಗಳ ತುಂಬ ಸವಿಚೈತ್ರವು.''<br>***ಉತ್ತರ :***<br>ಈ ವಾಕ್ಯವನ್ನು ಡಾ. ಬಸವರಾಜ ಸಾದರ ಅವರು ರಚಿಸಿದ 'ಸಿಸಿಫಸರ ಸುತ್ತು' ಕವನ ಸಂಕಲನದಿಂದ ಆಯ್ದ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿ ಯಗಾದಿಯ ಸಂತಸವನ್ನು ಕುರಿತು ಹೇಳಿದ್ದಾರೆ. ಚೈತ್ರಮಾಸ ಬಂತೆಂದರೆ ಪ್ರಾಣಿ, ಪಕ್ಷಿ, ಪ್ರಕೃತಿಯಲ್ಲಿ ಎಲ್ಲೆಲ್ಲೂ ಸಂಭ್ರಮ. ಇದೇ ಸಂದರ್ಭದಲ್ಲಿ ಬರುವ ಯುಗಾದಿ ಹಬ್ಬದಲ್ಲಿ ಯುಗದ ಹಿಂದಿನ | |

